# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

---

**ದಿನಾಂಕ: 28.01.2021 ರಂದು ಬೆಳಗ್ಗೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿದ ನಡೆದ 2020–21ನೇ ಸಾಲಿನ ದ್ವಿತೀಯ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

## ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಪುರುಷೋತ್ತಮ ರಾವ್ ಸಿಂಧ್ಯ | ಸದಸ್ಯರು |
| 3. | ಶ್ರೀ ನರಸಿಂಹಮೂರ್ತಿ ಸಿ.ಎನ್. | ಸದಸ್ಯರು |
| 4. | ಶ್ರೀ ನಾರಾಯಣ ಎಂ. | ಸದಸ್ಯರು |
| 5. | ಪ್ರೊ. ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. | ಸದಸ್ಯರು |
| 6. | ಡಾ. ಆನಂದ ಕುಮಾರಿ,<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 7. | ಡಾ. ಬಾಲಪ್ಪ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ. | ಸದಸ್ಯರು |
| 8. | ಡಾ. ಪಿ. ರಾಜಾರೆಡ್ಡಿ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು. | ಸದಸ್ಯರು |
| 9. | ಪ್ರೊ. ಜಗದೀಶ್ ಕೆ.ಎಸ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು–572101. | ಸದಸ್ಯರು |
| 10. | ಡಾ. ಎ.ಎಂ. ಶಿವಣ್ಣ,<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಎನ್.ಹೆಚ್.206, ಬಿ.ಹೆಚ್.ರಸ್ತೆ, ತಿಪಟೂರು–572201 | ಸದಸ್ಯರು |
| 11. | ಪ್ರೊ. ಹೆಚ್.ಎಸ್. ಶಿವಯೋಗಿ,<br>ಪ್ರಾಂಶುಪಾಲರು, ನವೋದಯ ಪ್ರಥಮ ದರ್ಜೆ ಕಾಲೇಜು, ಶೆಟ್ಟಿಕೆರೆ ರಸ್ತೆ, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ–572214 | ಸದಸ್ಯರು |
| 12. | ಡಾ. ಟಿ. ವೆಂಕಟಾಚಲಯ್ಯ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ತುಮಕೂರು ಜಿಲ್ಲೆ–572216 | ಸದಸ್ಯರು |
| 13. | ಪ್ರೊ. ಎಲ್.ಪಿ. ರಾಜು., ಪ್ರಾಧ್ಯಾಪಕರು | ಸದಸ್ಯರು |
| 14. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ., ಪ್ರಾಧ್ಯಾಪಕರು | ಸದಸ್ಯರು |
| 15. | ಪ್ರೊ. ಬಸವರಾಜ ಜಿ., ಪ್ರಾಧ್ಯಾಪಕರು | ಸದಸ್ಯರು |
| 16. | ಪ್ರೊ. ವಿಲಾಸ್ ಎಂ., ಕಡ್ರೊಳ್ಕರ್, ಪ್ರಾಧ್ಯಾಪಕರು | ಸದಸ್ಯರು |

| | | |
|---|---|---|
| 17. | ಪ್ರೊ. ಮೀನಾಕ್ಷಿ ಖಂಡೀಮತ್, ಪ್ರಾಧ್ಯಾಪಕರು | ಸದಸ್ಯರು |
| 18. | ಡೀನರು, ಕಲಾ ನಿಕಾಯ | ಸದಸ್ಯರು |
| 19. | ಡೀನರು, ಕಾನೂನು ನಿಕಾಯ | ಸದಸ್ಯರು |
| 20. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 21. | ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ | ಸದಸ್ಯರು |
| 22. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 23. | ಪ್ರೊ. ಪಿ. ಪರಮಶಿವಯ್ಯ<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 24. | ಡಾ. ಕೇಶವ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 25. | ಡಾ. ಬಿ.ಟಿ. ಸಂಪತ್ ಕುಮಾರ್., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 26. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 27. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 28. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

## ಹಾಜರಾಗದ ಸದಸ್ಯರು

| | | |
|---|---|---|
| 1 | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 2 | ಶ್ರೀ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3 | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 4 | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |
| 5 | ಪ್ರೊ. ಶಿವಾನಂದಯ್ಯ ಎನ್.ಪಿ.,<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು. | ಸದಸ್ಯರು |
| 6 | ಡಾ. ರಂಗಪ್ಪ ಎಸ್.ಟಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಶಿರಾ, ತುಮಕೂರು ಜಿಲ್ಲೆ–572137 | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:28.01.2021 ಗುರುವಾರ ಬೆಳಗ್ಗೆ 11:00 ಕ್ಕೆ ನಡೆದ 2020–21ನೇ ಸಾಲಿನ ದ್ವಿತೀಯ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 24.08.2020 ರಂದು ನಡೆದ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ಯತಾವತ್ತಾಗಿ ದೃಢೀಕರಿಸಲಾಯಿತು. | | | |
| ಶೈಕ್ಷಣಿಕ ವಿಭಾಗ | | | |
| 1. | 2020–21.ಸಾ.ವಿ.ವಿ.ಪ.02 ಶೈ.ವಿ–01 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 2. | 2020–21.ಸಾ.ವಿ.ವಿ.ಪ.02 ಶೈ.ವಿ–02 | 2020–21ನೇ ಶೈಕ್ಷಣಿಕ ಸಾಲಿಗೆ ಎರಡು ವರ್ಷಗಳ ಎಂ.ಸಿ.ಎ ಕೋರ್ಸ್‌ನ ಪಠ್ಯಕ್ರಮ ಮತ್ತು ವಿನಿಯಮವನ್ನು ಅನುಮೋದಿಸುವ ಕುರಿತು | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಎಂ.ಸಿ.ಎ ಪದವಿಯ ಪರಿಷ್ಕೃತ ವಿನಿಯಮ ಮತ್ತು ಪಠ್ಯಕ್ರಮವನ್ನು ಕೂಲಂಕಷವಾಗಿ ಪರಿಶೀಲಿಸಿ, ಅಂಗೀಕರಿಸಿ ವಿನಿಯಮವನ್ನು ಸರ್ಕಾರದ ಅನುಮೋದನೆಗೆ ಕಳುಹಿಸುವ ಸಂಬಂಧ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 3. | 2020–21.ಸಾ.ವಿ.ವಿ.ಪ.02 ಶೈ.ವಿ–03 | ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ | ವಿಶ್ವವಿದ್ಯಾನಿಲಯದ ಸ್ನಾತಕ ಶಿಕ್ಷಣ ಪದವಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 4. | 2020–21.ಸಾ.ವಿ.ವಿ.ಪ.02 ಶೈ.ವಿ–04 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| ಪಿ.ಹೆಚ್‌.ಡಿ ವಿಭಾಗ | | | |
| 5. | 2020–21.ಸಾ.ವಿ.ವಿ.ಪ.02 ಪಿ.ಹೆಚ್.ಡಿ–01 | ಸಕಾಲದಲ್ಲಿ ಪ್ರಗತಿ ವರದಿಗಳನ್ನು ಸಲ್ಲಿಸದೇ ಇರುವ ಸಂಶೋಧನಾರ್ಥಿಗಳ ಕುರಿತು | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ನಾಲ್ಕು ಸಂಶೋಧನಾರ್ಥಿಗಳಿಗೆ ಪ್ರತೀ ಪ್ರಗತಿ ವರದಿಗೆ ರೂ.2000/– (ಎರಡು ಸಾವಿರ ರೂಪಾಯಿಗಳು ಮಾತ್ರ) ರಂತೆ ದಂಡಶುಲ್ಕ ವನ್ನು ವಿಧಿಸಿ, ಪತ್ರ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸಲ್ಲಿಸದೇ ಇರುವ ಪ್ರಗತಿ ವರದಿಗಳನ್ನು ಸಲ್ಲಿಸಿ, ಸಂಶೋಧನೆಯನ್ನು ಮುಂದುವರೆಸಲು ಸಭೆಯು ಅನುಮತಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 6. | 2020–21.ಸಾ.ವಿ.ವಿ.ಪ.02 ಪಿ.ಹೆಚ್.ಡಿ–02 | ಸಕಾಲದಲ್ಲಿ ಪಿ.ಹೆಚ್.ಡಿ ಮಹಾ ಪ್ರಬಂಧವನ್ನು ಸಲ್ಲಿಸದೇ ಇರುವ ಸಂಶೋಧನಾರ್ಥಿಗಳ ಕುರಿತು | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸಕಾಲದಲ್ಲಿ ಪಿಹೆಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸದೇ ಇರುವ 13 ಸಂಶೋಧನಾರ್ಥಿಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ನಿಯಮದಂತೆ ದಂಡಶುಲ್ಕದೊಡನೆ ದಿನಾಂಕ 11.04.2021ರೊಳಗಾಗಿ ಮಾತ್ರ ಪಿಹೆಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿ, ವಿಷಯವನ್ನು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| **ಶೈಕ್ಷಣಿಕ ವಿಭಾಗ** | | | |
| 7. | 2020–21.ಸಾ.ವಿ.ವಿ.ಪ.02 ಶೈ.ವಿ–05 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಗಳಲ್ಲಿ ಸಹ ಅಧ್ಯಕ್ಷರನ್ನಾಗಿ ಜೇಷ್ಠತೆಯ ಆಧಾರದ ಮೇಲೆ ನಾಮನಿರ್ದೇಶನ ಮಾಡುವ ಬಗ್ಗೆ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಇನ್ನು ಮುಂದೆ ರಚಿಸುವ ಸ್ನಾತಕ ಅಧ್ಯಯನ ಮಂಡಳಿಗಳಲ್ಲಿ ಘಟಕ/ಸಂಯೋಜಿತ ಕಾಲೇಜುಗಳ ಬೋಧಕರನ್ನು ಜೇಷ್ಠತೆಯ ಆಧಾರದ ಮೇಲೆ ಸಹ–ಅಧ್ಯಕ್ಷ/ ಉಪಧ್ಯಾಕ್ಷರನ್ನಾಗಿ ನೇಮಿಸಲು ಸಭೆಯು ನಿರ್ಣಯಿಸಿತು. |
| 8. | 2020–21.ಸಾ.ವಿ.ವಿ.ಪ.02 ಶೈ.ವಿ–06 | Certificate Course in Japanese Language Levle-1, Level-2, Level-3, Level-4 ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಜಪಾನೀಸ್ ಭಾಷೆ ಕಲಿಕೆಯ ಸರ್ಟಿಫಿಕೇಟ್ ಕೋರ್ಸನ್ನು ಪ್ರಾರಂಭಿಸುವ ಸಂಬಂಧ ಸಿದ್ದಪಡಿಸಲಾಗಿರುವ ವಿನಿಯಮ ಮತ್ತು ಪಠ್ಯಕ್ರಮವನ್ನು ಕೂಲಂಕಷವಾಗಿ ಪರಿಶೀಲಿಸಿ, ಅಂಗೀಕರಿಸಿ, ಸದರಿ ವಿನಿಯಮವನ್ನು ಸರ್ಕಾರದ ಅನುಮೋದನೆಗೆ ಕಳುಹಿಸುವ ಸಂಬಂಧ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 9. | 2020–21.ಸಾ.ವಿ.ವಿ.ಪ.02 ಶೈ.ವಿ–07 | ತುಮಕೂರು ವಿಶ್ವವಿದ್ಯಾನಿಲಯದ ಪ್ರಸ್ತಾಪಿಸಲಾಗಿರುವ Regulations governing PG Degree Programmes offered under semester scheme with Choice Based Credit System (CBCS), 2020-21ಗಳ ಬಗ್ಗೆ ಸರ್ಕಾರದ ನಿರ್ದೇಶನದಂತೆ ಮಾರ್ಪಾಡುಗೊಳಿಸಿ, ಅಳವಡಿಸಿ ಸಿದ್ದಪಡಿಸಿರುವ ಪರಿಷ್ಕೃತ ಸಿ.ಬಿ.ಸಿ.ಎಸ್ ವಿನಿಯಮದ ಅನುಮೋದನೆ ಕುರಿತು. | ಸ್ನಾತಕೋತ್ತರ ಪದವಿಯ ಪರಿಷ್ಕೃತ ವಿನಿಯದ ಕುರಿತು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಪರಿಷ್ಕೃತ ವಿನಿಯಮದಲ್ಲಿ MOOC ಅನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ವಿನಿಯಮವನ್ನು ಸಲ್ಲಿಸಲು ತೀರ್ಮಾನಿಸಲಾಯಿತು ಹಾಗೂ ಸದರಿ ವಿನಿಯಮದಲ್ಲಿ ಪ.ಜಾ, ಪ.ಪಂ. ಮತ್ತು ಪ್ರವರ್ಗ–1ಕ್ಕೆ ಶೇ.40% ಅಂಕಗಳು, ಹಾಗೂ ಇನ್ನುಳಿದ ವರ್ಗಗಳಿಗೆ ಶೇ.45% ಅಂಕಗಳನ್ನು ಅರ್ಹತಾ ಅಂಕಗಳನ್ನಾಗಿ ಮಾರ್ಪಾಡು ಮಾಡಿ, ಸರ್ಕಾರಕ್ಕೆ ವಿನಿಯಮವನ್ನು ಸಲ್ಲಿಸಲು ಸಭೆಯು ತೀರ್ಮಾನಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಸಿಂಡಿಕೇಟ್ ವಿಭಾಗ** | | | |
| 10. | 2020–21.ಸಾ.ವಿ.ವಿ.ಪ.02 ಸಿಂ.ವಿ–01 | ತುಮಕೂರು ವಿಶ್ವವಿದ್ಯಾನಿಲಯದ ಹದಿನಾಲ್ಕನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡುವ ಕುರಿತು | ತುಮಕೂರು ವಿಶ್ವವಿದ್ಯಾನಿಲಯದ 14ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಕುರಿತು ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳಿಗೂ ಶ್ರೇಷ್ಠ ವ್ಯಕ್ತಿಯನ್ನು ಸೂಚಿಸಲು ಸಭೆಗೆ ತಿಳಿಸಿದರು. ನಂತರ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿ ಅವರಿಗೆ ಅಧಿಕಾರ ನೀಡಿತು ಹಾಗೂ ಈ ಬಗ್ಗೆ ಶಿಕ್ಷಣ ತಜ್ಞರ ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ವಿಷಯವನ್ನು ಸಿಂಡಿಕೇಟಿಗೆ ಶಿಫಾರಸ್ಸು ಮಾಡಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | | |
| • ಕೋವಿಡ್–2019 ಹಿನ್ನಲೆಯಲ್ಲಿ 2019–20ನೇ ಶೈಕ್ಷಣಿಕ ಸಾಲಿನಲ್ಲಿ ನಡೆದಂತಹ ಪರೀಕ್ಷೆಗಳಲ್ಲಿ ಅನುತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಮತ್ತೊಂದು ಪರೀಕ್ಷೆಯನ್ನು ನಡೆಸಲು ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿ ಮಾನ್ಯ ಕುಲಪತಿಗಳು ಡೀನರುಗಳ ಸಭೆ ಕರೆದು, ಚರ್ಚಿಸಿ ನಂತರ ಪರೀಕ್ಷೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಬಹುದೆಂದು ಸಭೆಗೆ ತಿಳಿಸಿದರು. | | | |

ಕುಲಸಚಿವರು

ಮಾನ್ಯ ಕುಲಪತಿಗಳು